**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**RA** 10026/2024 **PW**1

**ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಕೆ ಟಿ ಎ ವಕೀಲರಿಂದಃ**

ನಾನು ದ್ವಿತೀಯ ಪಿ ಯು ಸಿ ವರೆಗೆ ಓದಿಕೊಂಡಿರುತ್ತೇನೆ. ನನ್ನ ತಂದೆಗೆ ಮೂರು ಜನ ಮಕ್ಕಳು. ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು. ನಾನು ಪಾತ್ರೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ. ನನ್ನ ತಂದೆಯವರ ಕಾಲದಿಂದ ಸದರಿ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅಂಗಡಿ ವ್ಯವಹಾರವನ್ನು ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದರು. ನಾನು ಅವರಿಗೆ ಸಹಾಯ ಮಾಡುತ್ತಿದ್ದೆ. ನಾನು ವಿದ್ಯಾಭ್ಯಾಸ ಮಾಡಿಕೊಂಡು ಜೊತೆಗೆ ನನ್ನ ತಂದೆಗೆ ಅಂಗಡಿ ವ್ಯವಹಾರದಲ್ಲಿ ಸಹಾಯ ಮಾಡುತ್ತಿದ್ದೆ ಎಂದರೆ ಸರಿ. 2019 ರಲ್ಲಿ ಶಿವರಾತ್ರಿ ಹಬ್ಬದ ದಿನ ನನ್ನ ತಂದೆಗೆ ಹೃದಯಾಘಾತ ಆಗಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಸಾಯುವವರೆಗೆ ಕೇಸಿನ ವಿಷಯ ಗೊತ್ತಿರಲಿಲ್ಲ. 2024 ಮೇ ಮೊದಲ ವಾರದಲ್ಲಿ ನಮ್ಮ ವಕೀಲರು ಕೇಸಿನ ಬಗ್ಗೆ ನಮಗೆ ಪತ್ರ ಬರೆದಿದ್ದರಿಂದ ನಮಗೆ ಕೇಸಿನ ಬಗ್ಗೆ ಗೊತ್ತಾಗಿರುತ್ತದೆ. ನಮ್ಮ ವಕೀಲರು ಸದರಿ ಪತ್ರವನ್ನು ಬರೆಯುವವರೆಗೂ ನಮಗೆ ಆರ್ ಎಸ್ ಎ ನಲ್ಲಿ ಮತ್ತು ಎಫ್ ಡಿ ಪಿ ಕೇಸ್ ಗಳಲ್ಲಿ ಆದೇಶ ಆಗಿರುವ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಈ ಅಪೀಲ್ ನ್ನು ಹಾಕಲು ನಾವೇ ನಮ್ಮ ವಕೀಲರಿಗೆ ಹೇಳಿರುತ್ತೇವೆ. ಆರ್ ಎಸ್ ಎ 805/2015 ರಲ್ಲಿ ಗೌರವಾನ್ವಿತ ಹೈ ಕೋರ್ಟ್ ನಿಂದ ವಾರಸುದಾರರಾದ ನಮಗೆ ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಾವು

ಸದರಿ ಕೇಸ್ ನಲ್ಲಿ ಸಾಗರದ ವಕೀಲರ ಮುಖಾಂತರ ನಮ್ಮ ಪರವಾಗಿ ಹರಿಕೃಷ್ಣ ಹೊಳ್ಳ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇವೆ. ಸಾಕ್ಷಿ ಮುಂದುವರೆದು ಸದರಿ ಕೇಸಿನಲ್ಲಿ ನನ್ನ ಚಿಕ್ಕಪ್ಪ ಹರಿಕೃಷ್ಣ ಹೊಳ್ಳ ವಕೀಲರನ್ನು ನಮ್ಮ ಪರವಾಗಿ ನೇಮಕ ಮಾಡಿಕೊಂಡಿರುತ್ತಾರೆ. ವಕೀಲರು ನಮಗೆ ಬರೆದಂತಹ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಆ ಪತ್ರ ಈಗ ನಮ್ಮ ಬಳಿ ಇರುವುದಿಲ್ಲ ಎಂದು ಹೇಳುತ್ತಾರೆ.

ಈಗ ತೋರಿಸಿದ ಎಫ್ ಡಿ ಪಿ 10/2013 ರಲ್ಲಿ ಆರ್ಡರ್ 22 ರೂಲ್ 2 ಸಿ ಪಿ ಸಿ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಸದರಿ ಅರ್ಜಿಯೊಂದಿಗೆ ವಕಾಲತ್ತನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. 2019 ರಲ್ಲಿ ನಾವು ಎಫ್ ಡಿ ಪಿ 10/2013 ಕೇಸಿನಲ್ಲಿ ಕೆ ಎನ್ ಶ್ರೀಧರ್ ವಕೀಲರ ಮುಖಾಂತರ ನಾವು ಹಾಜರಾಗಿರುತ್ತೇವೆ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ವಕಾಲತ್ ಗೆ ಮತ್ತು ಪ್ರಮಾಣಪತ್ರಕ್ಕೆ ನನ್ನ ಸಹಿ ಹಾಕಿಸಿ ವಕೀಲರಿಗೆ ನೀಡಿರುತ್ತಾರೆ. ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಎಫ್ ಡಿ ಪಿ 10/2013 ರ ಕೇಸಿನ ವಿಚಾರ ನನಗೆ ಸಂಪೂರ್ಣ ವಾಗಿ ಗೊತ್ತಿದ್ದರೂ ಸಹ ನನಗೆ ಆ ಕೇಸಿನ ವಿಚಾರ ಗೊತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರ್ ಎಸ್ ಎ 805/2015 ರ ಕೇಸಿನಲ್ಲಿ ಗೌರವಾನ್ವಿತ ಹೈಕೋರ್ಟ್ ನ್ಯಾಯಾಲಯದಲ್ಲಿ ಹಾಜರಾಗಿದ್ದರೂ ಸಹ ನನಗೆ ಆ ಕೇಸಿನ ವಿಚಾರ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಅಪೀಲನ್ನು 577 ದಿವಸ ವಿಳಂಬವಾಗಿ ಸಲ್ಲಿಸಿರುವುದರಿಂದ ನಮ್ಮ ಅರ್ಜಿಯನ್ನು ಪುರಸ್ಕರಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ.ಆರ್ ಎಸ್ ಎ 815/2015 ಈ ಕೇಸಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).